ಸಿ.ಸಿ .ನಂ.225/2022 ಪಿಡಬ್ಲೂಃ 1

ದಿನಾಂಕಃ 12-06-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಾಯ್ ಆರ್ ಎಮ್ ವಕೀಲರಿಂದಃ**

7. ಸಾಮಾನ್ಯವಾಗಿ ನಮ್ಮ ಸೌಹಾರ್ದದಲ್ಲಿ ವಾರದಲ್ಲಿ ಸರ್ಕಾರಿ ರಜೆಯನ್ನು ಹೊರತು ಪಡಿಸಿ ಎಲ್ಲಾ ದಿನಗಳಲ್ಲಿ ಕಾರ್ಯ ನಿರ್ವಹಿಸುತ್ತೇವೆ . ಸೌಹಾರ್ದಗಳಲ್ಲಿ ಭಾನುವಾರ ಹೊರತು ಪಡಿಸಿ ಉಳಿದ ಎಲ್ಲಾ ದಿನಗಳಲ್ಲಿ ಸೌಹಾರ್ದಗಳು ತೆರೆದಿರುತ್ತವೆ ಎಂದರೆ ಸರಿ . ಭಾನುವಾರ ಹೊರತು ಪಡಿಸಿ ಸೌಹಾರ್ದಗಳಲ್ಲಿ ಎಲ್ಲಾ ದಿನಗಳಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಇದೆ ಎಂದರೆ ಗೊತ್ತಿಲ್ಲ. ಎಲ್ಲಾ ಬ್ಯಾಂಕುಗಳಲ್ಲಿ ಹಾಗೂ ಸೌಹಾರ್ದಗಳಲ್ಲಿ ಯಾವುದೇ ವ್ಯವಹಾರವನ್ನು ಭಾನುವಾರ ಮಾಡುವುದಿಲ್ಲ ಎಂದರೆ ಸರಿ . ಯಾವುದೇ ಬ್ಯಾಂಕು ಭಾನುವಾರ ಗ್ರಾಹಕರಿಗೆ ಯಾವುದೇ ವ್ಯವಹಾರವನ್ನು ನಡೆಸುವುದಿಲ್ಲ ಎಂದರೆ ಸರಿ . ನಮ್ಮ ಬ್ಯಾಂಕಿನಲ್ಲೂ ಕೂಡ ಭಾನುವಾರದ ದಿನ ಯಾವುದೇ ವ್ಯವಹಾರವನ್ನು ನಡೆಸಲು ಅನುಮತಿ ಕೊಡುವುದಿಲ್ಲ ಎಂದರೆ ಸರಿ .

8. ಈ ಪ್ರಕರಣದಲ್ಲಿ ಸಾಲಗಾರರು ಅರ್ಜಿಯನ್ನು ದಿಃ 13-12-2020 ರಂದು ಕೊಟ್ಟಿರುತ್ತಾರೆ. ಸಾಲಗಾರರು ಒಬ್ಬರೇ ಬಂದು ಅರ್ಜಿಯನ್ನು ಕೊಟ್ಟಿರುತ್ತಾರೆ. ಅಂದಾಜು ಸಾಲದ ಅರ್ಜಿ ಕೊಟ್ಟ ಎಷ್ಟು ದಿನಗಳಲ್ಲಿ ಸಾಲ ಮಂಜೂರಾಗುತ್ತದೆ ಎಂದರೆ ಸಾಕ್ಷಿ ಒಂದು ವಾರನು ಆಗಬಹುದು ಒಂದು ದಿನವೂ ಆಗಬಹುದು ಎಂದು ನುಡಿದಿರುತ್ತಾರೆ. ಸಾಲದ ಅರ್ಜಿ ಕೊಟ್ಟ ವಾರ , ದಿನಾಂಕ ಗೊತ್ತಿಲ್ಲ. ನಾನು ಹೇಳುವ ಪ್ರಕಾರ ನಿಪಿ-7 ಸಾಲದ ಅರ್ಜಿ ಹಾಗೂ ಅದರಲ್ಲಿ ತೋರಿಸಿದ ದಿನಾಂಕ 13-12-2020 ಎಂದರೆ ಸರಿ . ದಿಃ 13-12-2020 ಇದು ಭಾನುವಾರ ಎಂದರೆ ಗೊತ್ತಿಲ್ಲ. ದಿಃ 13-12-2020 ಭಾನುವಾರ ಆದ್ದರಿಂದ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸಾಕ್ಷಿ ವ್ಯವಹಾರ ನಡೆದಿದೆ ದಿನಾಂಕ ಬರೆಯುವಲ್ಲಿ ತಪ್ಪಾಗಿರಬಹುದು ಎಂದು ನುಡಿದಿರುತ್ತಾರೆ.

ಪಿಡಬ್ಲೂಃ 1

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮನವಿಯನ್ನು ತಿರಸ್ಕರಿಸಲಾಯಿತು . ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು . )

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.